(ಶ್ರೀ ವಾಟಾಳ್ ನಾಗರಾಜ್, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಜಿ.ವಿ. ಶ್ರೀರಾಮರೆಡ್ಡಿ, ಶ್ರೀ ಎಸ್. ರಾಜೇಂದ್ರನ್, ಶ್ರೀ ಕೆ. ಜಯಪ್ರಕಾಶ್ ಹೆಗಡೆಯವರುಗಳು ಸಭಾತ್ಯಾಗ ಮಾಡುವರು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2006ರ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಮಂಡಿಸಲು ಅನುಮತಿ ನೀಡಿತು". ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಅನುಮತಿ ನೀಡಲಾಯಿತು

ಈಗ ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಬೇಕು.

7. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಅಧ್ಯಕ್ಷರು : ಈಗ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 899 ಮತ್ತು 902 ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಮತ್ತು ಶ್ರೀ ಮಲ್ಲಿಕಾರ್ಜುನ ಎಸ್. ಖೂಬಾ ರವರ ಎರಡೂ ಪ್ರಶ್ನೆ ಗಳನ್ನು ಒಟ್ಟಿಗೆ ಸೇರಿಸಿ ತೆಗೆದುಕೊಳ್ಳಲಾಗಿದೆ.

165 (899) ಮತ್ತು (902) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮತ್ತು ಶ್ರೀ ಮಲ್ಲಿಕಾರ್ಜುನ ಎಸ್. ಖೂಬಾ (ಬಸವಕಲ್ಯಾಣ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗುವುದು;

ಆ) ಇದಕ್ಕಾಗಿ ಸರ್ಕಾರ ಈ ಸಾಲಿನ ಬಜೆಟ್‌ನಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ;

ಇ) ಬೀದರ್‌ನಲ್ಲಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ; ಕಟ್ಟಡ ನಿರ್ಮಾಣ ಹಾಗೂ ಇತರ ಯಾವ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ; ಬೀದರ್‌ನಲ್ಲಿ ಪ್ರಸಕ್ತ ಸಾಲಿನಲ್ಲಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲಾಗುವುದೇ?

ಡಾ॥ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಬೆಳಗಾಂ, ಮಂಡ್ಯ, ಹಾಸನ, ಶಿವಮೊಗ್ಗ, ರಾಯಚೂರು ಮತ್ತು ಬೀದರ್‌ನಲ್ಲಿ ತಲಾ ಒಂದು ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದ್ದು, ಭಾರತೀಯ ವೈದ್ಯಕೀಯ ಪರಿಷತ್ತು ಮತ್ತು ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ಮಾಡಲಾಗುತ್ತಿದೆ.

ಆ) ರೂ. 39.33 ಕೋಟಿ

ಇ) ಬೀದರ್ ವೈದ್ಯಕೀಯ ಕಾಲೇಜಿನ ಕಟ್ಟಡದ ಕೆಲಸ ಹಾಗೂ ಇತರೆ ಚಟುವಟಿಕೆಗಳು ಪ್ರಗತಿಯಲ್ಲಿದೆ. ಬೋಧಕ ಸಿಬ್ಬಂದಿ ನೇಮಕಾತಿ ಲಭ್ಯತೆಯ ಆಧಾರದ ಮೇಲೆ ಮಾಡಲಾಗಿದೆ. ಉಳಿದ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಪೀಠೋಪಕರಣಗಳನ್ನು ಖರೀದಿಸಲು ಕಾರ್ಯಾದೇಶ ನೀಡಲಾಗಿದೆ. ಭಾರತೀಯ ವೈದ್ಯಕೀಯ ಪರಿಷತ್ತು ಮತ್ತು ಕೇಂದ್ರ ಸರ್ಕಾರದೊಂದಿಗೆ ಈ ಬಗ್ಗೆ ಸಮಾಲೋಚನೆ ಮಾಡಲಾಗುತ್ತಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಧ್ಯಕ್ಷರೇ, ಪ್ರಶ್ನೆ (ಆ) ಗೆ ಉತ್ತರದಲ್ಲಿ ಅವರು ಐದಾರು ಹೆಸರುಗಳನ್ನು ಹೇಳಿದ್ದಾರೆ. ಈ ಸಾಲಿನಲ್ಲಿ 39 ಕೋಟಿ ರೂಪಾಯಿಗಳನ್ನು ಕೂಡ ಇಟ್ಟಿದ್ದೇವೆಂದು ಹೇಳಿದ್ದಾರೆ. ಮೊನ್ನೆ ಕೂಡ ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿತ್ತು. ಬೀದರ್‌ನಲ್ಲಿ ಕಳಪೆ ಕೆಲಸ ನಡೆಯುತ್ತಿದೆ, ಬಿಲ್ಡಿಂಗ್ ಸರಿಯಾಗಿಲ್ಲವೆಂದು ದೊಡ್ಡದಾಗಿ ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿದೆ. ಮತ್ತು ಎಲ್ಲಾ ವೈದ್ಯಕೀಯ ಕಾಲೇಜುಗಳನ್ನು ಕೇಂದ್ರಸರ್ಕಾರದವರು ರಿಜೆಕ್ಟ್ ಮಾಡಿದ್ದಾರೆ, ಈ ವರ್ಷ ಪರ್ಮಿಷನ್‌ನನ್ನು ಕೊಡುವುದಿಲ್ಲವೆಂದು ಗೊತ್ತಾಗಿದೆ. ಅದು ನಿಜವೋ ಹೇಗೆ? ಹಾಗಿದ್ದರೆ ಮತ್ತೆ ಯಾವಾಗ ಶುರು ಮಾಡುತ್ತೀರಿ? ಅದರ ಬಗ್ಗೆ ಟೀಚರ್‌ಗಳು, ಲೆಕ್ಚರರ್‌ಗಳು ಎಲ್ಲಾ ಪೂರ್ವಭಾವಿ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದೀರಾ? ಅಥವಾ ಈ ವರ್ಷ ಕಾಲೇಜು ಪ್ರಾರಂಭವಾಗುತ್ತದೋ ಹೇಗೆ? ಅಥವಾ ಬರುವ ವರ್ಷ ಶುರುವಾಗುತ್ತದೋ ಹೇಗೆ? ಇದಕ್ಕೆ ತಾವು ಸ್ಪಷ್ಟವಾಗಿ ಉತ್ತರವನ್ನು ಹೇಳಬೇಕು. ಕೆಲಸವಂತೂ ಕಳಪೆ ಕೆಲಸ ನಡೆಯುತ್ತಿದೆ. ಕೆಲಸ ಇವತ್ತಿಗೆ ಮುಗಿಯುವುದಿಲ್ಲ. ಹೋದಸಾರಿ ಯಾವಾಗಲೊ ಡಿಸೆಂಬರ್‌ನಲ್ಲಿ ಮುಗಿಯಬೇಕಾಗಿತ್ತು. ಇವತ್ತಿನವರೆಗು ಮುಗಿದಿಲ್ಲ. ಆದರೂ ಕೂಡ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಒಬ್ಬರೂ ಪ್ರೊಫೆಸರ್ಸ್ ಇಲ್ಲ. ಅದಕ್ಕಾಗಿ ತಾವು ದಯವಿಟ್ಟು ಅದನ್ನು ಮಾಡುವ ಇಚ್ಛೆ ಇದೆಯೊ ಇಲ್ಲವೋ, ಅದನ್ನು ತಾವು ಹೇಳಬೇಕು.

ಡಾ: ವಿ. ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಇದು ತಮಗೆಲ್ಲರಿಗೂ ಗೊತ್ತಿರುವ ವಿಚಾರ. ನಮ್ಮ ರಾಜ್ಯದಲ್ಲಿ ಹಿಂದಿನ ಸರ್ಕಾರ ಧರ್ಮಸಿಂಗ್ ನೇತೃತ್ವದ ಸರ್ಕಾರ ಆರು ಹೊಸ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಬೇಕೆಂದು ಒಮ್ಮೆ ನಿರ್ಧಾರವನ್ನು ಮಾಡಿತ್ತು. ಆ ಸದನದಲ್ಲಿ ನಾನು ಅದನ್ನು ತುಂಬಾ ಉತ್ತಮ ರೀತಿಯಿಂದ ಸ್ವಾಗತ ಮಾಡಿದೆ. ಆದರೆ ಒಂದು ಎಚ್ಚರಿಕೆಯನ್ನು ನಾನು ಆಗ ಕೊಟ್ಟಿದ್ದೆ. 61ನೇ ಇಸವಿಯವರೆಗೆ ಒಟ್ಟು ರಾಜ್ಯದಲ್ಲಿ 4 ಮೆಡಿಕಲ್ ಕಾಲೇಜುಗಳಾದರೆ ಆಮೇಲೆ 45 ವರ್ಷದ ನಂತರ ಒಂದು ಕಾಲೇಜು ಆಗಿರಲಿಲ್ಲ. ಒಂದೇ ಬಾರಿ ಆರು ಪ್ರಾರಂಭ ಮಾಡುವಂಥದ್ದು ಬಹಳ ಕಠಿಣವಾಗಬಹುದೆಂದು ಹೇಳಿದ್ದೆ. ಇವತ್ತು ಅದು ಅವತ್ತು ಹೇಳಿದಂಥ ಮಾತು ನಿಜವಾಗುತ್ತಿದೆ. ಏಕೆಂದರೆ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಬೇಕಾದರೆ ಬರೀ ಕಟ್ಟಡ ಎಕ್ವಿಪ್‌ಮೆಂಟ್ ಮಾತ್ರವಲ್ಲ, ಸಫಿಷಿಯೆಂಟ್ ಫ್ಯಾಕಲ್ಟಿ ಮೆಂಬರ್ಸ್ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಬೇಕಾಗುತ್ತಾರೆ. ನಾವು ಎಲ್ಲಾ ಪ್ರಯತ್ನವನ್ನೂ ಮಾಡಿದ್ದೇವೆ. ಅದನ್ನು ಫೆಬ್ರವರಿಯ ನಂತರ ಮತ್ತು ಇನ್ನಷ್ಟು ಹೆಚ್ಚಿಗೆ ವೇಗವಾಗಿ ಆ ಕಾರ್ಯವನ್ನು ಮಾಡಬೇಕೆಂದು ಮಾಡಿದ್ದೇವೆ. ಸುಮಾರು ಆರು ನಿಯೋಜಿತ ಮೆಡಿಕಲ್ ಕಾಲೇಜಿನ ಗೌರ್ನಿಂಗ್ ಕೌನ್ಸಿಲ್ ಮೀಟಿಂಗ್ ಮೂರ್ನಾಲ್ಕು ಬಾರಿ ನಡೆದಿದೆ. ನಾನು ಅಲ್ಲಿಗೆ ವೈದ್ಯಕೀಯ ಸಚಿವನಾಗಿ ಭೇಟಿಯನ್ನು ಕೊಟ್ಟಿದ್ದೇನೆ. ನಿಮ್ಮ ಬೀದರ್‌ಗೂ ಬಂದಿದ್ದೆ. ಇವತ್ತು ಪ್ರಶ್ನೆ ಏನಾಗಿದೆ ಎಂದರೆ ಪ್ರಾರಂಭಿಕ ಹಂತದಲ್ಲಿ ಅಂದರೆ Inception ಸ್ಟೇಜ್‌ನಲ್ಲಿ 15 ಸಾವಿರ ಚದರ ಮೀಟರ್ ಬಿಲ್ಡಿಂಗ್ ಕಟ್ಟಡ, ಆಮೇಲೆ ಉಳಿದಂತೆ ಹಾಸ್ಟೆಲ್ ಇತ್ಯಾದಿಗಳು ಇವೆಲ್ಲಾ ಆಗಬೇಕಾಗುತ್ತವೆ. ಎಕ್ವಿಪ್‌ಮೆಂಟ್ ಬೇಕು. ಮತ್ತು ಸಿಬ್ಬಂದಿಯೂ ಬೇಕು. ಪ್ರಾರಂಭಿಕ ಹಂತದಲ್ಲಿ ಸಿಬ್ಬಂದಿ ಬೇಕು.

ಮತ್ತು 300 ಬೆಡ್‌ನ ಆಸ್ಪತ್ರೆ ಬೇಕು. ಇದರಲ್ಲಿ ತಾವು ಡಿಸೆಂಬರ್‌ಗೇ ಆಗಬೇಕಿತ್ತು ಎಂದು ಹೇಳಿದಿರಿ, ಅಲ್ಲ. ಹಿಂದಿನ ಸರ್ಕಾರ ಒಪ್ಪಿಕೊಂಡಂಥ ಕಂಟ್ರಾಕ್ಟ್ ಪ್ರಕಾರವೇ 9, 10, 11 ಅಂದರೆ ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಪ್ರಾರಂಭಿಕ ಹಂತದ ಕಟ್ಟಡ ಕಂಪ್ಲೀಟ್ ಮಾಡುವುದಕ್ಕೆ ಇರತಕ್ಕಂಥದ್ದು. ಅಂಥದ್ದರಲ್ಲಿ 4 ತಿಂಗಳು ಮೇ ತಿಂಗಳ ಆಖೈರಿನೊಳಗೆ ಈ ಪ್ರಾರಂಭಿಕ ಹಂತದ ಕಾಮಗಾರಿ ಆಗಬೇಕೆಂದು ಬಹಳ ಪ್ರತಿ ವಾರ ವಾರವೂ ಅದರ ಪ್ರಗತಿಯನ್ನು ನೋಡುತ್ತಿದ್ದೇವೆ. ದುಡ್ಡಿನ ಪ್ರಶ್ನೆಇಲ್ಲ. ಬಜೆಟ್‌ನಲ್ಲಿ 30 ಕೋಟಿ ರೂ. ಇಟ್ಟಿದ್ದೇವೆ. ನಾವು ಮೊನ್ನೆ 85 ಕೋಟಿ ರೂಪಾಯಿಗಳನ್ನು ಮಾರ್ಚ್ 31ಕ್ಕೆ ಪೇಮೆಂಟ್ ಮಾಡಿದ್ದೇವೆ. ಮತ್ತು ಈ ಬಾರಿಯೂ ಇಟ್ಟಿದ್ದೇವೆ. ಅದಕ್ಕೂ ಹೆಚ್ಚಿಗೆ ಈಗಾಗಲೇ ನಾವು ಅದಕ್ಕೆ ಬೇಕಾದ ಆರ್ಥಿಕ ಸಪೋರ್ಟ್‌ನ್ನು ಕೊಡುತ್ತೇವೆ. ಆದರೆ ಪ್ರಶ್ನೆ ಬಂದಿರುವುದು ಕಟ್ಟಡದಲ್ಲೂ 10–15–20 ಪರ್‌ಸೆಂಟ್ ಪ್ರಾರಂಭಿಕ ಹಂತದಲ್ಲಿ 4 ತಿಂಗಳು ಬೇಗ ಮಾಡಬೇಕೆಂದು ಹೇಳಿದರು. ಕೆಲವೊಂದು ಅನಿವಾರ್ಯ ಕಾರಣದಿಂದ ಒಂದಷ್ಟು ಪರ್‌ಸೆಂಟೇಜ್ ಹಿಂದೆ ಬಿದ್ದಿದೆ. ಮತ್ತು ಎಕ್ಸಿಪ್‌ಮೆಂಟ್ಸ್‌ನ ಪ್ರಶ್ನೆಯೂ ಇಲ್ಲ. ಎಕ್ವಿಪ್‌ಮೆಂಟ್ಸ್‌ಗಳೆಲ್ಲಾ ಸಮಯಕ್ಕೆ ಸರಿಯಾಗಿ ಬರುತ್ತಿವೆ. ಆಗಸ್ಟ್ 31 ರೊಳಗೆ ನಮ್ಮ ವಿದ್ಯಾರ್ಥಿಗಳ ಸೇರ್ಪಡೆ ಕೆಲಸ ಆಗಬೇಕಗಿರುವುದರಿಂದ ಇನ್ನೂ 60–62 ದಿವಸ ಸಮಯ ಇದೆ, ಅಂತ ಹೆಳುವಂಥ ಮಾತನ್ನು ನಾವು ಭಾರತ ಸರ್ಕಾರಕ್ಕೂ ತಿಳಿಸಿದ್ದೇವೆ. ಮತ್ತು ತಾವು ಹೇಳಿದ ಹಾಗೆ ಮೊನ್ನೆ ಬಂದಂಥ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ಟೀಮ್ ಆರು ಕಾಲೇಜುಗಳನ್ನು ಜೂನ್ ಪ್ರಥಮ ವಾರದಲ್ಲಿ 9–10 ತಾರೀಖಿನವರೆಗೆ ಅವರು ಸಂದರ್ಶನವನ್ನು ಕೊಟ್ಟು ಕೆಲವೊಂದು ಅಬ್ಸರ್ವೇಷನ್ಸ್ ಮಾಡಿದ್ದಾರೆ. ಅಬ್ಸರ್ವೇಷನ್‌ನಲ್ಲಿ ಅವರು ಎಲ್ಲೆಲ್ಲಿ ಯಾವ ಯಾವ ಏರಿಯಾದಲ್ಲಿ ಡಿಫಿಸಿಯೆನ್ಸಿ ಇದೆ, 3–4 ಪ್ರಮುಖ ವಲಯದಲ್ಲಿ ಡಿಫಿಸಿಯೆನ್ಸಿ ಇದೆ ಎಂದು ಹೇಳಿ ತೋರಿಸಿದ್ದಾರೆ. ಆ ಕೊರತೆಗಳನ್ನು ನೀಗಿಸುವುದಕ್ಕೆ ಏನು ಮಾಡುತ್ತೇವೆಂದು ಕಂಪ್ಲೆಯೆನ್ಸ್ ರಿಪೋರ್ಟನ್ನು ಕೇಳಿದ್ದಾರೆ. ಈ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ನಲ್ಲಿ ಕಂಪ್ಲೀಟ್ ಆಗಬಹುದೆಂದು ಕಂಟ್ರಾಕ್ಟ್ ಇದ್ದ ಬಿಲ್ಡಿಂಗ್‌ಗಳನ್ನು ಬೇಗನೆ ಮಾಡಿಕೊಂಡು ಅತೀ ಕಷ್ಟದಲ್ಲಿ ಸ್ಟಾಫ್ ಮೆಂಬರ್ಸ್‌ನ್ನೂ ಜೊತೆಗೂಡಿಸಿಕೊಂಡು ನಾವು ಮನುಷ್ಯ ಮಾತ್ರದಿಂದ ಏನೇನು ಮಾಡಬಹುದೋ, ಅದೆಲ್ಲವನ್ನೂ ಮಾಡಿದ್ದೇವೆ. ಮತ್ತು ನಾಡಿದ್ದು ಮೊನ್ನೆ 26ನೇ ತಾರೀಖಿನವರೆಗೆ ಭಾರತ ಸರ್ಕಾರಕ್ಕೂ ನಾವು ನಮ್ಮ ಕಂಪ್ಲೆಯೆನ್ಸ್ ಎರಡು ಕಾಲೇಜಿನ ಮಟ್ಟಿಗೆ ಕೊಟ್ಟಿದ್ದೇವೆ. ಬೆಳಗಾಂ ಮತ್ತು ಮಂಡ್ಯ ಕಾಲೇಜು ಈಗ ಅಲ್ಲಿ ಶೇಕಡ 5ಕ್ಕಿಂತಲೂ ಕಡಿಮೆ ಡಿಫಿಸಿಯೆನ್ಸಿ ಇದೆ ಎಂದು ಹೇಳುವಂಥ ಕಂಪ್ಲೆಯೆನ್ಸ್‌ನ್ನು ಕೊಟ್ಟಿದ್ದರಿಂದ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದವರೆಗೆ ಅದನ್ನು ಪುನರ್ ಪರಿಶೀಲನೆ ಮಾಡಿಕೊಡುವಂಥ ಅಧಿಕಾರವೂ ಇದೆ. ಅಲ್ಲದಿದ್ದರೆ ಭಾರತ ಸರ್ಕಾರಕ್ಕೆ ಶೇಕಡ 8 ರಷ್ಟು ಕೊರತೆಯಿದ್ದರೂ ಅದನ್ನು ಕೊಡುವಂಥ ಅಧಿಕಾರ ಇದೆ. ನಮ್ಮೆಲ್ಲರ ಒಂದು ಆಸೆ ಬೆಳಗಾಂ ಮತ್ತು ಮಂಡ್ಯ ಮೆಡಿಕಲ್ ಕಾಲೇಜುಗಳು ಈ ವರ್ಷ ಪ್ರಾರಂಭವಾಗಬಹುದು ಎಂದಿದ್ದೇವೆ. ಆದರೆ ಇಂಥ ಒಂದು ಸಂಕಷ್ಟದ ಪರಿಸ್ಥಿತಿಯಲ್ಲಿ ಒಂದು ಕಾಲೇಜು ಹೊಸದಾಗಿ ಪ್ರಾರಂಭ ಮಾಡಲಿಕ್ಕಾದರೂ ಅದು ಒಂದು ದೊಡ್ಡ ಗೆಲುವು ಎಂದು

ಹೇಳುವಂಥ ಭಾವನೆ ನಮ್ಮಲ್ಲಿರಬೇಕು. ವಿನಃ ನಾವೇನೂ ಮಾಡಲಿಕ್ಕಾಗಲಿಲ್ಲವೆಂದು ಹೇಳಿ ನಿರಾಶರಾಗಿ ಕೈಚೆಲ್ಲುವಂಥದ್ದಲ್ಲ. ಖಂಡಿತವಾಗಿ ನಮ್ಮ ರಾಜ್ಯದಲ್ಲಿ ಆರು ಕಾಲೇಜುಗಳು ಅಂತರರಾಷ್ಟ್ರೀಯ ಮಟ್ಟದ ಒಂದು ಗುಣಮಟ್ಟವನ್ನು ಇಟ್ಟುಕೊಂಡು ಈ ವರ್ಷಕ್ಕೆ ಒಂದು ವೇಳೆ ಎರಡು ಮಾತ್ರ ಆದರೂ ಮುಂದಿನ ವರ್ಷಕ್ಕೆ ಅದನ್ನು ಸರಿಪಡಿಸುವಂಥ ಕೆಲಸವನ್ನು ನಾವು ಬಹಳ ಪ್ರಯತ್ನಪಟ್ಟು ಮಾಡುತ್ತೇವೆ. ನಿಮ್ಮ ಬೀದರ್‌ಗೆ ಸಂಬಂಧಪಟ್ಟ ಹಾಗೆ ಮೊನ್ನೆ ಭಾರತೀಯ ಮೆಡಿಕಲ್ ಕೌನ್ಸಿಲ್‌ನವರು ಬಂದಾಗ ಬೋಧಕ ಸಿಬ್ಬಂದಿಯಲ್ಲಿ ಸುಮಾರು 50 ಶೇಕಡ ಕೊರತೆ ಇದ್ದುದ್ದರಿಂದ ನಮಗೆ ಅಲ್ಲಿ ಅದನ್ನು ಮತ್ತೆ ಉಳಿದಂಥ ಎಂಟು-ಹತ್ತು ದಿವಸದಲ್ಲಿ ಭರ್ತಿ ಮಾಡತಕ್ಕದ್ದು ಸಾಧ್ಯವಿಲ್ಲ. You cannot get Anatomy, Physiology, Bio-Chemistry Professors. ಪ್ರೊಫೆಸರ್ಸ್ ನಮ್ಮ ರಾಜ್ಯದಲ್ಲೇ ಕೊರತೆ ಇದ್ದಾರೆ. ರಿಟೈರ್ ಆದವರನ್ನು ಪಡೆಯುವಂಥ ಪ್ರಯತ್ನ ಆಯಿತು. ಸಕಲ ಪ್ರಯತ್ನವನ್ನು ಮಾಡಿದರೂ ಬೆಳಗಾಂಗೆ ಮಾಡಿದರು. ಮಂಡ್ಯಕ್ಕೂ ಸಹಾ ನಾವು ಬಹಳ ಕಷ್ಟದಿಂದ ಹೊಂದಿಸಿಕೊಂಡು ಈಗ ಎರಡು ಕಾಲೇಜುಗಳನ್ನು ಪ್ರಾರಂಭ ಮಾಡುವಂಥ ಬಗ್ಗೆ ಭಾರತ ಸರ್ಕಾರಕ್ಕೆ ನಮ್ಮ ತೃಪ್ತಿಕರವಾದ ಒಂದು ಉತ್ತರವನ್ನು ಕೊಟ್ಟಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ತಮ್ಮ ಉತ್ತರದಲ್ಲಿ ಈ ವರ್ಷ ಬೀದರ್‌ದ್ದು ಶುರುವಾಗುವುದಿಲ್ಲವೆಂದು ಅರ್ಥವಾಯಿತು. ಬೀದರ್ ಶುರುವಾಗುವುದಿಲ್ಲ, ಬಹಳ ಕೊರತೆಗಳಿವೆ, ಆದ್ದರಿಂದ ಶುರುವಾಗುವುದಿಲ್ಲವೆನ್ನುವ ಮಾತನ್ನು ತಾವು ಹೇಳುತ್ತಿದ್ದೀರಿ. ಈಗ ಕೆಲವು ಲೆಕ್ಚರರ್‌ಗಳು, ಪ್ರೊಫೆಸರ್ಸ್‌ಗಳು ಸಿಗುವುದಿಲ್ಲ, ನಿಜ. ಅದಕ್ಕೆ ತಾವು ನಿವೃತ್ತಿ ಆದವರನ್ನು ಹೆಚ್ಚು ಸಂಬಳ ಕೊಟ್ಟು ಮಾಡಿಕೊಳ್ಳಬೇಕು. ನೀವೇನು ನಿಗದಿ ಮಾಡಿದ್ದೀರಿ, 50 ಸಾವಿರ ಮಾಡಿದ್ದೀರಿ. 50 ಸಾವಿರ ರೂ.ಗೆ ಯಾರೂ ಬರುವುದಿಲ್ಲ. ಸಂಬಳ ಹೆಚ್ಚು ಮಾಡಬೇಕಾಗುತ್ತದೆ. ಆಂಧ್ರ ಪ್ರದೇಶದಲ್ಲಿ 60 ಸಾವಿರ, 70 ಸಾವಿರ, ಒಂದು ಲಕ್ಷದವರೆಗೂ ಕೊಡುತ್ತಿದ್ದಾರೆ. ಆ ಪದ್ಧತಿಯಲ್ಲಿ ತಾವು ಹೆಚ್ಚು ಮಾಡಲಿಲ್ಲವೆಂದರೆ ಈ ಕಾಲೇಜು ಇನ್ನು ಹತ್ತು ವರ್ಷವಾದರೂ ಶುರುವಾಗುವ ಪ್ರಶ್ನೆ ಬರುವುದಿಲ್ಲ. ನಾವು ಬಹಳ ಪ್ರಯತ್ನವನ್ನು ಹಿಂದೆಯೇ ಮಾಡಿದ್ದೇವೆ. ಆಗುವುದಿಲ್ಲ. ಪ್ರಾಕ್ಟಿಕಲ್ ಆಗಿ ತಾವು ಅದನ್ನು ಹೆಚ್ಚು ಮಾಡಬೇಕಾಗುತ್ತದೆ. ಅಥವಾ ತಾವು ನಿವೃತ್ತಿಯಾದವರನ್ನು ಕೂಡ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಆಗುವುದಿಲ್ಲ. ಆ ವಯೋಮಿತಿಯನ್ನು ತಾವು ವಿನಾಯಿತಿ ಮಾಡಿ ನಿವೃತ್ತಿಯಾದವರನ್ನು ತೆಗೆದುಕೊಳ್ಳಬೇಕು. ಮೆಡಿಕಲ್ ಕೌನ್ಸಿಲ್‌ನವರು ರಿಜೆಕ್ಟ್ ಮಾಡಿದ್ದಾರೆಯೇ ಅಥವಾ ಕೆಲವು ಕೊರತೆಗಳನ್ನು ಸರಿಪಡಿಸಬೇಕೆಂದು ಹೇಳಿದ್ದಾರಾ? ಆ ರೀತಿ ಈ ವರ್ಷ ಅದನ್ನು ಸರಿಪಡಿಸುತ್ತೀರಾ? ಇನ್ನೊಂದು ಕಳಪೆ ಕೆಲಸದ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನೀವೇನೂ ಹೇಳಿಲ್ಲ. ಮತ್ತು ಡಿ.ಸಿ. ಅವರು ಈಗಾಗಲೇ ಕಂಟ್ರಾಕ್ಟರ್‌ಗೆ ಬ್ಲಾಕ್‌ಲಿಸ್ಟ್‌ಗೆ ಹಾಕಿದ್ದಾರೆಂದು ಕೇಳಿದ್ದೇನೆ. ಅದು ಹೌದೋ ಅಲ್ಲವೋ? ಕೆಲಸ ಸರಿ ಇದೆಯೋ ಹೇಗೆ? ಕಳಪೆ ಕೆಲಸ ಇದೆಯೋ? ಇದರ ಬಗ್ಗೆ ಕೂಡ ತಾವು ಹೇಳಬೇಕು.

ಡಾ: ವಿ. ಎಸ್. ಆಚಾರ್ಯ : ಕಾಲೇಜಿನ ಬೋಧಕ ಸಿಬ್ಬಂದಿಯ ಬಗ್ಗೆ ಮಾನ್ಯ ಸದಸ್ಯರೇನು ಹೇಳಿದ್ದಾರೆ, ಅದನ್ನೆಲ್ಲಾ ಈಗಾಗಲೇ ಮನಸ್ಸಿನಲ್ಲಿಟ್ಟುಕೊಂಡು ನಿವೃತ್ತರಾದವರನ್ನು

ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ಒಂದು ಅವಕಾಶದ ಪ್ರಕಾರ 65 ವರ್ಷ ದವರೆಗೆ ಕೆಲಸ ಮಾಡುವುದಕ್ಕೆ ಅವಕಾಶ ಇದೆ ಎಂದು ಹೇಳುವಂಥದ್ದನ್ನು ನಾವು ಜಾರಿಗೆ ಕೊಟ್ಟು ನಾವು ನೇಮಕ ಮಾಡಿಕೊಂಡಿದ್ದೇವೆ. ಬೇರೆ ಕಾಲೇಜಿನಿಂದ ಇಲ್ಲಿಗೆ ಬರುವವರನ್ನು ನಾವು ತೆಗೆದುಕೊಂಡಿದ್ದೇವೆ. ಪ್ರಾರಂಭಿಕ ಹಂತದಲ್ಲಿ ಬರುವ ಅಸಿಸ್ಟೆಂಟ್ ಪ್ರೊಫೆಸರ್ ಗ್ರೇಡ್‌ನವರು ಯಾರ್ಯಾರು ಬಂದಿದ್ದಾರೆ, ಬೆಸ್ಟ್ ಮೆಟೀರಿಯಲ್ಸ್ , ಅವರನ್ನು ನಾವು ತೆಗೆದುಕೊಂಡಿದ್ದೇವೆ. ಮತ್ತು ದೀರ್ಘಾವಧಿ ಕಾಲದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಮತ್ತು ಡೆಂಟಲ್ ಶಿಕ್ಷಣಕ್ಕೆ ಅಖಿಲ ಭಾರತ ಮಟ್ಟದಲ್ಲಿ ಅವರಿಗೇನು ಅನುಮತಿ ಇದೆ, 65 ವರ್ಷ, ಅದೇ ರೀತಿ ಸೇರ್ಪಡೆ ಸಂದರ್ಭದಲ್ಲಿ ಅವರು ಸೇವೆಗೆ ಸೇರ್ಪಡೆಯಾಗುವಾಗಲೇ ಅವರ ರಿಟೈರ್‌ಮೆಂಟ್ 65 ವರ್ಷ ಎಂದು ಆಗುವ ಹಾಗೆ ಸೂಕ್ತ ತಿದ್ದುಪಡಿಯನ್ನು ನಮ್ಮ ರೆಕ್ರೂಟ್‌ಮೆಂಟ್ ರೂಲ್ಸ್‌ಗೆ ಮಾಡುವ ಹಾಗೆ ಮಾಡಿದ್ದೇವೆ. ಅದರಿಂದ ನಮ್ಮ ಪರಿಸ್ಥಿತಿ ಸ್ವಲ್ಪ ಸುಧಾರಣೆಯಾಗಬಹುದು. ಇನ್‌ಕ್ರಿಮೆಂಟ್ಸ್ ಓವರ್ ಅಂಡ್ ಅಬವ್ 5 ಇನ್‌ಕ್ರಿಮೆಂಟ್ಸ್, 7 ಇನ್‌ಕ್ರಿಮೆಂಟ್ಸ್ ಕೊಡುವುದಕ್ಕೆ ಬೇಕಾದಂಥ ಒಂದು ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಆಮೇಲೆ ತಾವು ಹೇಳುವ ಹಾಗೆ ಆ ಹೆಚ್ಚಿನ ವೇತನವನ್ನು ಸರ್ಕಾರಿ ಕಾಲೇಜಿನಲ್ಲಿ ಅಲ್ಲಿ ಕೊಡುತ್ತಿಲ್ಲ. ಆಂಧ್ರದಲ್ಲಿ ಅಥವಾ ತಮಿಳುನಾಡಿನಲ್ಲಿ. ಖಾಸಗಿ ಕಾಲೇಜುಗಳಲ್ಲಿ ಅದು ಅಲ್ಲಿಯವರೆಗೆ ಹೋಗಬೇಕೆಂದು ಇಲ್ಲ. ನಮ್ಮಲ್ಲಿ ಕೂಡ ಇವತ್ತು ಖಾಸಗಿ ಕಾಲೇಜಿನಲ್ಲಿ ಬಹಳ ಹೆಚ್ಚು ಆಕರ್ಷಣೆ ಅವರು ಕೊಡುತ್ತಿದ್ದಾರೆ. ನಮ್ಮ ಸ್ಟಾಫನ್ನು ಅವರು ಆಕರ್ಷಣೆ ಮಾಡಿ ಅವರು ಅಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಇದೆಲ್ಲಾ ಇದೆ. ಆದರೆ ಇಷ್ಟೆಲ್ಲಾ ತಾಪತ್ರಯಗಳ ಮಧ್ಯೆಯೂ ಒಂದು ವಿಷಯವನ್ನು ತಮಗೆ ಮನವರಿಕೆ ಮಾಡಿಕೊಡಲು ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಅಷ್ಟು ಸಿಬ್ಬಂದಿಗಳೇ ಇಲ್ಲ. ನಮ್ಮ ರಾಜ್ಯದಲ್ಲಿ ವೈದ್ಯಕೀಯ ಕಾಲೇಜಿಗೆ ಬೇಕಾಗುವಷ್ಟು ಅನಾಟೆಮಿ ಫಿಸಿಯಾಲಜಿ ಮತ್ತು ಬಯೋ ಕೆಮಿಸ್ಟ್ರಿ ಮತ್ತು ಇತರ ಸಿಬ್ಬಂದಿಗಳು ಲಭ್ಯತೆ ಇಲ್ಲ. ಒಬ್ಬ ಪ್ರೊಫೆಸರ್ ಆಗಬೇಕಾದರೆ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಸೇರಿ ಒಂಭತ್ತು ವರ್ಷ ಬೇಕಾಗುತ್ತದೆ. ಹಾಗಾಗಿ ಆ ಒಂದು ಲಭ್ಯತೆಯನ್ನು ಆ ಒಂದು ಕೇಡರ್ ನಿರ್ಮಾಣ ಮಾಡಬೇಕಾಗುತ್ತದೆ. ಕಟ್ಟಡದ ಬಗ್ಗೆ, ಕಟ್ಟಡದ ಕೊರತೆ ಸುಮಾರು ಪ್ರಾರಂಭಿಕ ಹಂತದ ಕಟ್ಟಡದ ಕೊರತೆ ಬೀದರ್‌ನಲ್ಲಿ 20 ರಿಂದ 24 ಪರ್‌ಸೆಂಟ್ ಇದೆ. ಕಳಪೆ ಗುಣಮಟ್ಟ ಎಂದು ಹೇಳುವಂಥದ್ದು ಇಲ್ಲ. ನಮಗೆ ಕಳಪೆ ಗುಣಮಟ್ಟದ ಪ್ರಸಂಗ ಎಲ್ಲಾ ಆರು ಕಾಲೇಜಿನ ಕಡೆಯಿಂದ ಬಂದಿಲ್ಲ.

5.30 P.M.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಸಿಬ್ಬಂದಿ ಇಲ್ಲವೆಂದು ಹೇಳಿದರಲ್ಲಾ, ಆದರೆ ಬೇರೆ ಬೇರೆ ಜಾಗಗಳಲ್ಲಿ deputation ಮೇಲೆ ಹೋಗಿರುವ Professors ಗಳು ಬಹಳ ಜನ ಇದ್ದಾರೆ. ತಮಗೂ ಕೂಡ ಅದು ಗಮನಕ್ಕೆ ಬಂದಿದೆ. Professors, Assistant Professors ಇಲ್ಲವೆಂದು ತಾವೇನು ಈಗ ಹೇಳಿದಿರಿ, College ನ faculties ಇಲ್ಲವೆಂದು ಏನು ಹೇಳುತ್ತಿದ್ದೀರಿ, ಆದರೆ ಬಹಳಷ್ಟು ಜನ Professors they are not in the district. They have

already taken deputaion and they are working in some other department. ಎಷ್ಟು ವರ್ಷಗಳಿಂದ? ಆ details ನಿಮಗೆ ಸಿಗುತ್ತದೆ. ನೀವು ಅವರೆಲ್ಲರನ್ನೂ ವಾಪಸ್ಸು ಕರೆಸಿ. ಅವರೆಲ್ಲರನ್ನೂ ವಾಪಸ್ಸು ಕರೆಸಿದರೆ ನೀವೇನು College ನ faculties ಇಲ್ಲವೆಂದು ಹೇಳುತ್ತಿದ್ದೀರಿ ಅದನ್ನು ನೀವು ವಾಪಸ್ಸು ಕರೆಸಿಕೊಂಡಿದ್ದರಲ್ಲಿಯೇ ಶುರು ಮಾಡಬಹುದು. ಎಲ್ಲಾ Professors ಕೂಡ they are deputation with other departments.

ಡಾ: ವಿ.ಎಸ್. ಆಚಾರ್ಯ : ಆ ಕೆಲಸವನ್ನೂ ಮಾಡುತ್ತಿದ್ದೇವೆ. Health and family welfare departmet ನಲ್ಲಿ ಯಾರ್ಯಾರು ತಜ್ಞ ವೈದ್ಯರಿದ್ದಾರೆ, ಯಾರಿಗೆ ವೈದ್ಯಕೀಯ ಶಿಕ್ಷಣ ಇಲಾಖೆಗೆ ಬರಲಿಕ್ಕೆ ಮನಸ್ಸಿದೆ, ಅವರನ್ನೆಲ್ಲಾ ಈ ಕಡೆಗೆ ತರುವಂಥ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. We have already identified them. ಅದರಲ್ಲಿ ಈ ಇಲಾಖೆಯಲ್ಲಿ ತಾವು ಹೇಳಿದಂಥ anatomy, physiology, bio-chemistry ಯವರು ಬಹಳ ಕಡಿಮೆಯಿದ್ದಾರೆ. ಅವರಿಲ್ಲ. Anatomy ಯವರು ಆಸ್ಪತ್ರೆಯಲ್ಲೇಕೆ ಕೆಲಸ ಮಾಡುತ್ತಾರೆ? Pysiology ಅವರು ಆಸ್ಪತ್ರೆಯಲ್ಲೇಕೆ ಕೆಲಸ ಮಾಡುತ್ತಾರೆ? ಅವರು college ನಲ್ಲೇ ಕೆಲಸ ಮಾಡುವವರು. ಹಾಗಾಗಿ, ನಮಗೀಗ ಪ್ರಾರಂಭಿಕ ಹಂತದಲ್ಲಿ ಬೇಕಾದಂಥ 21 Professors, Assistant Professors ಪ್ರತಿ college ಗೆ ಆ material ಇಂಥ ಆಸ್ಪತ್ರೆಯಲ್ಲಿಲ್ಲ. ಹಾಗಾಗಿ, ತಾಪತ್ರಯ. ಮೊನ್ನೆ ನಮಗೆ ಒಂದೂವರೆ ವರ್ಷ ಧಾಟಿದ ಮೇಲೆ ಬೇಕಾದಂಥ clinical subjects ನವರು ನಮ್ಮ ಹತ್ತಿರ ಎಲ್ಲರೂ ಇದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು : ಎಲ್ಲ ವಿವರವಾಗಿ ಹೇಳಿದ್ದಾರೆ. ಚರಿತ್ರೆ ಹೇಳಿದ ಹಾಗೆ ಹೇಳಿದರಲ್ರಿ. ಎಲ್ಲಾ ವಿಚಾರವನ್ನೂ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನೀವೇನಾದರೂ ಅವರಿಗೆ ಹೆಚ್ಚು ಕೊಟ್ಟು ಬೇರೆ ಕಡೆಯಿಂದ ತರಲಿಲ್ಲವೆಂದರೆ ನಿಮಗೆ ಇವತ್ತೂ ಇಲ್ಲ, ಮುಂದೆಯೂ ಸಿಗುವುದಿಲ್ಲ. ಇದರ ಬಗ್ಗೆ 2 ವರ್ಷ try ಮಾಡುತ್ತಿದ್ದೇವೆ. ಆಗುವುದಿಲ್ಲ. ಅದಕ್ಕೆ ತಾವು ಅವರಿಗೆ ಸಂಬಳವನ್ನು ಹೆಚ್ಚು ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ. ಎಲ್ಲಾ ಕೇಳಿದರೆ ಇನ್ನೂ 2 ಗಂಟೆಯಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅದಕ್ಕೆ ಯಾರೂ ಬರುವುದಿಲ್ಲ. ಅವರಿಗೆ ಸಂಬಳವನ್ನು ಹೆಚ್ಚು ಮಾಡಬೇಕಾಗುತ್ತದೆ. ಮಾಡಿಲ್ಲವೆಂದರೆ, ಮುಂದೆ college ಗಳು ಬರುವುದಿಲ್ಲ. ಸುಮ್ಮನೆ ನಾವು ಆಸೆ ಇಟ್ಟುಕೊಂಡು ನಮ್ಮ college ಆಗುತ್ತದೆ ಎಂದುಕೊಂಡರೆ ಆಗುವುದಿಲ್ಲ. ಅದಕ್ಕೆ ತಾವು ಸಂಬಳವನ್ನು ಹೆಚ್ಚು ಮಾಡಬೇಕು. ಹೆಚ್ಚು ಮಾಡಿಲ್ಲವೆಂದರೆ ನಮಗ್ಯಾರೂ ಸಿಗುವುದಿಲ್ಲ. ನೀವು percentage ಹೆಚ್ಚು ಮಾಡಿ, increment ಹೆಚ್ಚು ಮಾಡಿ. Total 55,000 ರೂ. ಆಗುತ್ತದೆ.

50 ರ ಮೇಲೆ ಹೋಗುವುದಿಲ್ಲ. 55 ಕೊನೆಗೆ ಅದು. ಅದೆಲ್ಲಾ ನಾವು ನೋಡಿದ್ದೇವೆ. ಅದಕ್ಕೆ ಅವರ್ಯಾರೂ ನಿಮ್ಮಲ್ಲಿಗೆ ಬರಲಿಕ್ಕೆ ತಯಾರಿಲ್ಲ. ಅದಕ್ಕೆ ತಾವು ಹೆಚ್ಚು ಮಾಡಬೇಕು. ಮಾಡಿದರೆ ಬರುತ್ತಾರೆ. ಇಲ್ಲವೆಂದರೆ, college ಶುರುವಾಗುವುದಿಲ್ಲ. ತಾವು ಕಳಪೆ ಕೆಲಸವಾಗುತ್ತಿಲ್ಲವೆಂದು ಹೇಳಿದ್ದೀರಿ. Paper ನಲ್ಲಿ ಅದು ಬಹಳ ದೊಡ್ಡದಾಗಿ ಬಂದಿದೆ. ತಾವು ಗಮನಹರಿಸಿ. D.C. ಯವರು ಆ contractor ಅನ್ನು blacklist ನಲ್ಲಿ ಹಾಕಿದ್ದಾರೆ. ಇದರ ಬಗ್ಗೆ detail enquiry ಮಾಡಿ, immediate ಆಗಿ ಕೆಲಸ ಶುರು ಮಾಡಿ. ಮುಂದಿನ ವರ್ಷ ಶುರು ಮಾಡುತ್ತೇವೆಂದಾದರೂ ಹೇಳಿ. ಎರಡು ವರ್ಷಗಳಿಂದ ಶುರುವಾಗಿಲ್ಲ. ಈಗಲಾದರೂ ಮಾಡುತ್ತೀರೋ? ಇಲ್ಲವೋ ಎನ್ನುವ ಭಾವನೆಯಾದರೂ ಬರಲಿ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಬೆಳಗಾಂ medical college ನದ್ದು ತಾವು ಈಗಾಗಲೇ ಏನು ಹೇಳಿದಿರಿ, ಅದನ್ನೆಲ್ಲಾ ನಾವು ಪೂರ್ತಿ ಮಾಡಿದ್ದೇವೆ. 85 percent building construction ಆಗಿದೆ. 85 per cent ಮೇಲೆ ಆಗಿದೆ ಮತ್ತು Professors ಅನ್ನು ತುಂಬಿದ್ದೇವೆ. Anatomy Professors ಅನ್ನೂ ಕೂಡ ನಾವು ಖಾಸಗಿ medical college ನಿಂದ ರಾಜೀನಾಮೆ ಕೊಡಿಸಿ ಸರ್ಕಾರಿ medical college ನಲ್ಲಿ ಅವರನ್ನು ಸೇರಿಸಿದ್ದೇವೆ. ದಯವಿಟ್ಟು, ತಾವೇನು ಈಗ ಉತ್ತರ ಕೊಟ್ಟಿರಿ ಅದನ್ನು ನಾವು ಪೂರ್ತಿ ಮಾಡಿದ್ದೇವೆ. ಇದೇ ವರ್ಷದಿಂದ ಬೆಳಗಾಂ medical college ಪ್ರಾರಂಭವಾಗಲಿಕ್ಕೆ ತಾವು ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮೆರಾಜುದ್ದೀನ್ ಪಟೇಲ್ : ಮಾನ್ಯ ಅಧ್ಯಕ್ಷರೇ, Professors salary ಜಾಸ್ತಿ ಮಾಡುವ ಬಗ್ಗೆ ತಾವು ವಿಚಾರಿಸಬೇಕು. ಎರಡನೆಯದಾಗಿ, ತಮಗೆ ಮಾಡಲಿಕ್ಕೆ ಅವಕಾಶವಿಲ್ಲ, ಮಾಡಲಿಕ್ಕೆ ಬರುವುದಿಲ್ಲ ಎಂದರೆ ಬೇರೆ ಕಡೆಯಿಂದ deputation ಏನಾದರೂ ಮಾಡಿ ವ್ಯವಸ್ಥೆ ಮಾಡಬೇಕು. ಮೂರನೆಯದು, ಅವರ ಕಳಪೆ ಕೆಲಸದ ಬಗ್ಗೆ ಏನು ತಾವು ಹೇಳಿದಿರಿ, ಅದರ ಬಗ್ಗೆ immediate ಆಗಿ enquiry report ತರಿಸಬೇಕು. ಆ ಕಳಪೆ ಕೆಲಸ ಎಲ್ಲಿ ನಡೆಯುತ್ತಿದೆ ಎಂದು ನಿಮಗೆ complaint ಬಂದಿದೆ ಅದನ್ನು ಸರಿಪಡಿಸಬೇಕು. ತಾವು ಅದರ ಬಗ್ಗೆ immediate ಆಗಿ action ತೆಗೆದುಕೊಳ್ಳಬೇಕು.

ಡಾ: ವಿ. ಎಸ್. ಆಚಾರ್ಯ : ಸದಸ್ಯರಾದಂಥ ಪ್ರಕಾಶ್‌ರವರು ಹೇಳಿದಂಥ ವಿಷಯದ ಬಗ್ಗೆ ನಾನು ಬಹಿರಂಗವಾಗಿ ಒಂದು ಅಭಿನಂದನೆ ಸಲ್ಲಿಸಬೇಕು. ಅಲ್ಲಿಯ ನಮ್ಮ ಪ್ರಕಾಶ್ ಹುಕ್ಕೇರಿಯವರು ಹಾಗೂ ನಮ್ಮ ಎಂ.ಪಿ. ಯವರು ಎಲ್ಲಾ ರೀತಿಯ ಸಹಕಾರವನ್ನು ಕೊಟ್ಟಿದ್ದಾರೆ. ಉಳಿದವರೂ ಕೊಟ್ಟಿದ್ದಾರೆ. ಆದರೆ, ಮಿಗಿಲಾದಂಥ ಒಂದು ಸಹಾಯವನ್ನೂ MCI team ಬರುವಾಗ, ಬೇರೆ ಬೇರೆ ಸಂದರ್ಭದಲ್ಲಿ ಅವರೆಲ್ಲಾ ವಿಶೇಷವಾದಂಥ ಆಸಕ್ತಿಯನ್ನು ನಮ್ಮ ಲೋಕಸಭಾ ಸದಸ್ಯರು, ವಿಧಾನ ಸಭಾ ಸದಸ್ಯರು, ಅಲ್ಲಿಯ ಉಸ್ತುವಾರಿಯವರೂ ಎಲ್ಲರೂ ಮಾಡಿದ್ದರಿಂದ ನಮಗೊಂದು ಆಶಾದಾಯಕವಾದಂಥ ಮಟ್ಟಕ್ಕೆ ಬಂದಿದೆ. ಉಳಿದಂತೆ, ಕಳಪೆ ಕಾಮಗಾರಿ ಏನಿದೆ ಅದರ ಬಗ್ಗೆ ತನಿಖೆ ಮಾಡಿಸುತ್ತೇನೆ.